# ಸೋನಾಕ್ಷಿಯ ಮದುವೆ?



ಕಳೆದ ವರ್ಷವಿಡೀ ಬಾಲಿವುಡ್‌ನಲ್ಲಿ ಮದುವೆಗಳ ಮೆರವಣಿಗೆ. ಕಳೆದ ಕೆಲವು ವರ್ಷಗಳಿಂದ ಅಭಿಮಾನಿಗಳ ಹೃದಯಕ್ಕೆ ಕಿಚ್ಚು ಹಚ್ಚಿದ ಬಹುಬೇಡಿಕೆಯ ನಟಿಯರೆಲ್ಲ ಮದುವೆಯಾದರು. ಈ ವರ್ಷ ಹೀಗೆ ಮದುವೆಯಾಗುವ ಜನಪ್ರಿಯ ನಟಿ ಯಾರು? ಬಾಲಿವುಡ್‌ನ ಬಹುತೇಕ ಪಂಡಿತರ ಪ್ರಕಾರ, ಈ ವರ್ಷ ಮದುವೆಯಾಗುವಾಕೆ ಸೋನಾಕ್ಷಿ ಸಿನ್ಹಾ!

ಈ ಊಹೆ ಹಬ್ಬಲೂ ಕಾರಣವಿದೆ. ಸೋನಾಕ್ಷಿ ಇತ್ತೀಚೆಗೆ ಜಹೀರ್ ಇಕ್ಬಾಲ್ ಎನ್ನುವ ನವನಟನ ಜೊತೆಗೆ ಬಿಂದಾಸ್ ಆಗಿ ಸುತ್ತುತ್ತಿದ್ದಾಳಂತೆ. ಈ ಜಹೀರ್ ಇಕ್ಬಾಲ್ ಬಾಲಿವುಡ್‌ನಲ್ಲಿ ಸಲ್ಮಾನ್ ಖಾನ್‌ನ ಕೃಪಾಶ್ರಯ ಇರುವ ನಟ ಎನ್ನುವುದು ಎಲ್ಲರಿಗೂ ಗೊತ್ತು. ಸಲ್ಮಾನ್ ನಿರ್ಮಾಪಕನಾಗಿರುವ 'ನೋಟ್‌ಬುಕ್' ಸಿನಿಮಾದ ನಾಯಕ. ಈ ಚಿತ್ರದಲ್ಲಿ ಹಿರಿಯ ನಟ ನೂತನ್ ಮೊಮ್ಮಗಳು ಪ್ರನೂತನ್ ಬೆಹ್ಲ್ ನಾಯಕಿ. ಕಾಶ್ಮೀರದ ಹಿನ್ನೆಲೆಯಲ್ಲಿ ಅರಳುವ ಪ್ರೇಮಕಥೆ ಹೊಂದಿರುವ ಚಿತ್ರ ಮಾರ್ಚ್ ಕೊನೆಗೆ ತೆರೆ ಕಾಣಲಿದೆ. ಸಲ್ಮಾನ್ ಜಹೀರ್‌ನನ್ನು ಸೋನಾಕ್ಷಿಗೆ ಪರಿಚಯಿಸಿದನಂತೆ. ಸಲ್ಮಾನ್‌ನ ಬರ್ತ್‌ಡೇ ಪಾರ್ಟಿಗೂ ಈ ಜೋಡಿ ಜೊತೆಯಾಗಿ ಬಂದು ಸುದ್ದಿ ಮಾಡಿತ್ತು.

31ರ ಹರೆಯದ ಸೋನಾಕ್ಷಿ ಸದ್ಯಕ್ಕೆ ಬ್ಯುಸಿ ನಟಿ. ಅಲಿಯಾ ಭಟ್, ವರುಣ್ ಧವನ್, ಆದಿತ್ಯ ರಾಯ್ ಜೊತೆಗೆ ಈಕೆ ನಟಿಸಿರುವ 'ಕಳಂಕ್' ಸಾಕಷ್ಟು ಸುದ್ದಿ ಮಾಡುತ್ತಿದೆ. ಕರಣ್ ಜೋಹರ್ ನಿರ್ಮಾಣದ ಈ ಚಿತ್ರದಲ್ಲಿ ಸೋನಾಕ್ಷಿ ಪೈಪೋಟಿಯ ಅಭಿನಯ ನೀಡಿದ್ದಾಳಂತೆ. ಇನ್ನೊಂದೆಡೆ ಅಕ್ಷಯ್ ಕುಮಾರ್ ನಾಯಕನಾಗಿರುವ 'ಮಿಶನ್ ಮಂಗಳ್'ಗೆ ಈಕೆ ನಾಯಕಿ. ಸಲ್ಮಾನ್ ಜೊತೆಗಿನ 'ದಬಾಂಗ್–3' ಈ ವರ್ಷದ ಕೊನೆಗೆ ಬಿಡುಗಡೆಯಾಗಲಿದೆ. ಬ್ಯುಸಿಯ ಮಧ್ಯೆಯೇ ಸೋನಾಕ್ಷಿ, ಜಹೀರ್ ಜೊತೆಗೆ ಓಡಾಡುತ್ತಿರುವುದು ಸದ್ಯಕ್ಕೆ ಬಾಲಿವುಡ್‌ನ ಹಾಟ್ ಸುದ್ದಿ.



# ಟೈಗರ್ ರೋಮಾಂಚನ

ಟೈಗರ್ ಶ್ರಾಫ್ ಬಾಲಿವುಡ್‌ನ ಆ್ಯಕ್ಷನ್‌ಪ್ರಿಯರ ಕಣ್ಮಣಿ. ಹಲವು ಸಮರ ಕಲೆಗಳನ್ನು ಕರಗತ ಮಾಡಿಕೊಂಡಿರುವ ಟೈಗರ್ ಶ್ರಾಫ್, ಈಗ ಹೊಸ ಚಿತ್ರವೊಂದರಲ್ಲಿ ಬಾಲಿವುಡ್‌ನ ಡ್ಯಾನ್ಸಿಂಗ್ ಸ್ಟಾರ್ ಹೃತಿಕ ರೋಷನ್ ಜೊತೆಯಾಗಿ ನಟಿಸುತ್ತಿದ್ದಾನೆ. ಸಿದ್ಧಾರ್ಥ ಆನಂದ್ ನಿರ್ದೇಶನದ ಈ ಹೊಸ ಚಿತ್ರದಲ್ಲಿ 'ಹೃತಿಕ್ ಜೊತೆಗೆ ನಟಿಸುವುದು ನನಗೆ ರೋಮಾಂಚನ ತಂದಿರುವ ಸಂಗತಿ' ಎಂದು ಸ್ವತಃ ಟೈಗರ್ ಶ್ರಾಫ್ ಹೇಳಿದ್ದಾನೆ.

'ಸತ್ಯ ಹೇಳಬೇಕೆಂದರೆ ನಾನು ಹೃತಿಕ್ ಅವರ ಕಟ್ಟಾ ಅಭಿಮಾನಿ. ಅವರ – ಕಹೋ ನ ಪ್ಯಾರ್ ಹೈ – ಚಿತ್ರ ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಹೃತಿಕ್ ಅವರ ಬರ್ತ್‌ಡೇಗೆ ಈ ಚಿತ್ರದ –ಏಕ್ ಫಲ್ ಕಾ ಜೀನಾ' ಹಾಡಿಗೆ ನಾನು ಡ್ಯಾನ್ಸ್ ಮಾಡಿರುವ ವೀಡಿಯೋ ಒಂದನ್ನು ಕಾಣಿಕೆಯಾಗಿ ನೀಡಿದ್ದೇನೆ. ಈಗ ಹೊಸ ಚಿತ್ರದಲ್ಲಿ ಅವರ ಜೊತೆಗೆ ಡ್ಯಾನ್ಸ್ ಪೈಪೋಟಿ ನಡೆಸಲು ನಾನು ಉತ್ಸುಕನಾಗಿದ್ದೇನೆ' ಎಂದೂ ಟೈಗರ್ ಹೇಳಿದ್ದಾನೆ.

ಅಂದ ಹಾಗೆ, 'ಭಾಗಿ–3' ಚಿತ್ರದಲ್ಲಿ ಟೈಗರ್ ಇನ್ನಷ್ಟು ಹೊಸ ಸಮರಕಲೆಗಳನ್ನು ಪ್ರದರ್ಶಿಸಲಿದ್ದಾನಂತೆ. ಅದಕ್ಕಾಗಿ ಇಸ್ರೇಲ್ ಜಗದ್ವಿಖ್ಯಾತ ಗೂಢಚರ್ಯೆ ಸಂಸ್ಥೆ ಮೊಸಾದ್‌ನ ಏಜೆಂಟರ ದಾಳಿ ಶೈಲಿಯ ಕುರಿತು ಸಾಕಷ್ಟು ಸಂಶೋಧನೆ ನಡೆದಿದೆಯಂತೆ. ಈ ಮಧ್ಯೆ ಹಾಲಿವುಡ್‌ನ ನಿರ್ಮಾಪಕ ಲಾರೆನ್ಸ್ ಕಸನೊಫ್ ಅವರು ಮುಂಬೈಗೆ ಬಂದು ಟೈಗರ್‌ನನ್ನು ಭೇಟಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಟೈಗರ್, ಹಾಲಿವುಡ್ ಚಿತ್ರವೊಂದರಲ್ಲಿ ನಟಿಸುತ್ತಾನೆ ಎನ್ನುವ ಸುದ್ದಿಯೂ ಹಬ್ಬಿದೆ.

■ ಬಿಂದು